ಶ್ರೀ ಯು.ಟಿ. ಖಾದರ್: ರಾಜ್ಯ ಸರ್ಕಾರ ಬೇರ ಬೇರೆ ಕಡೆ ಹೈಸ್ಕೂಲುಗಳನ್ನು ಪ್ರಾರಂಭಿಸುತ್ತಿತ್ತು. ರಾಷ್ಟ್ರೀಯ ಮಾಧ್ಯಮಿಕ ಶಿಕ್ಷಣ ಅಭಿಯಾನದಡಿಯಲ್ಲಿ ರಾಜ್ಯ ಸರ್ಕಾರ ಸ್ವಂತವಾಗಿ ಎಲ್ಲ ಕಡೆಯೂ ಹೈಸ್ಕೂಲುಗಳನ್ನು ಪ್ರಾರಂಭ ಮಾಡಬೇಡಿ ಎಂದು ಹೇಳಲಿಲ್ಲ. ಕೇಂದ್ರ ಸರ್ಕಾರ ಅವರದೇ ಒಂದು guidelines start ಮಾಡುತ್ತಾರೆ. ನಾವು ಕೇಳುವುದೇನೆಂದರೆ, ರಾಜ್ಯ ಸರ್ಕಾರ ಕನಿಷ್ಠ ಪ್ರತಿ ಗ್ರಾಮಕ್ಕೆ ಒಂದಾದರೂ ಹೈಸ್ಕೂಲ್ ಅನ್ನು ಮಂಜೂರು ಮಾಡುವ ವ್ಯವಸ್ಥೆ ಮಾಡಿ. ರಾಜ್ಯ ಶಿಕ್ಷಣ ಇಲಾಖೆ ಹೈಸ್ಕೂಲ್ ಅನ್ನು ಪ್ರಾರಂಭ ಮಾಡುವುದಿಲ್ಲ. ಒಂದು ಪಿಯುಸಿ ಕಾಲೇಜ್ ಪ್ರಾರಂಭ ಮಾಡುವುದಿಲ್ಲ. ಮತ್ತೆ ಏನು ಮಾಡುತ್ತಿದೆ? ಕೇವಲ ಸಂಬಳ ಕೊಡುತ್ತಿದ್ದರೆ ಆಗುವುದಿಲ್ಲ. ರಾಜ್ಯ ಸರ್ಕಾರದ ಶಿಕ್ಷಣ ಇಲಾಖೆಯಿಂದ ಒಂದು ಕ್ಷೇತ್ರಕ್ಕೆ ಕನಿಷ್ಠ ಎರಡು ಹೈಸ್ಕೂಲುಗಳನ್ನು ಮಂಜೂರು ಮಾಡಬೇಕೆಂದು ಕೇಳಿಕೊಳ್ಳುತ್ತೇವೆ.

ಶ್ರೀ ವಿಶ್ವೇಶ್ವರ ಹೆಗಡೆ ಕಾಗೇರಿ: ಇಡೀ ರಾಜ್ಯದಲ್ಲಿ ಹೈಸ್ಕೂಲುಗಳು ಹೆಚ್ಚು ಸಂಖ್ಯೆಯಲ್ಲಿ ಬೇಕು, ಜೂನಿಯರ್ ಕಾಲೇಜುಗಳು ಹೆಚ್ಚು ಸಂಖ್ಯೆಯಲ್ಲಿ ಬೇಕು ಎಂದಿದೆ. ಏಕೆಂದರೆ, ಶಿಕ್ಷಣವನ್ನು ಸಾರ್ವತ್ರೀಕರಣಗೊಳಿಸಬೇಕೆನ್ನುವುದು ಸರ್ಕಾರದ ನಿಶ್ಚಯವಾಗಿದೆ. ಪಾಲಕರಿಗೆ, ಮಕ್ಕಳು ಸಹಜವಾಗಿ ವಿವಿಧ ಹಂತದಲ್ಲಿ ಹೆಚ್ಚು ಹೆಚ್ಚು ಶಿಕ್ಷಣವನ್ನು ಪಡೆಯಬೇಕೆನ್ನುವ ಬಯಕೆಯೂ ಹಿಂದಿನದಕ್ಕಿಂತ ಇಂದಿನ ದಿನಗಳಲ್ಲಿ ಹೆಚ್ಚಾಗಿದೆ. ಆ ಹಿನ್ನೆಲೆಯಲ್ಲಿ ರಾಜ್ಯ ಸರ್ಕಾರವಾಗಿಯೂ ಅಗತ್ಯವಾಗಿ ಹೊಸ ಹೊಸ ಹೈಸ್ಕೂಲು ಕಾಲೇಜುಗಳನ್ನು ತೆರೆಯುವ ಪ್ರಯತ್ನವನ್ನು ನಾವು ಮಾಡುತ್ತೇವೆ. ಕೇಂದ್ರ ಸರ್ಕಾರದ ಯೋಜನೆಯಲ್ಲೂ ನಮ್ಮ ರಾಜ್ಯಕ್ಕೆ ಎಷ್ಟು ಹೆಚ್ಚು ಅನುಕೂಲತೆ ತೆಗೆದುಕೊಳ್ಳಬಹುದೋ ಆ ದಿಕ್ಕಿನಲ್ಲಿ ನಾವು ನಮ್ಮ ಪ್ರಯತ್ನ ಮಾಡುತ್ತೇವೆ.

ಗ್ರಾಮೀಣ ಕುಡಿಯುವ ನೀರಿನ ಯೋಜನೆ ನಿರ್ವಹಣೆ

25 (379) ಶ್ರೀ ಶಿವಲಿಂಗೇಗೌಡ. ಕೆ.ಎಂ (ಅರಸೀಕೆರೆ) :– ಮಾನ್ಯ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಸಚಿವರು ದಯೆಯಿಟ್ಟು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ:–

(ಅ) ರಾಜ್ಯದಲ್ಲಿ ರಾಜೀವ ಗಾಂಧಿ ರಾಷ್ಟ್ರೀಯ ಕುಡಿಯುವ ನೀರಿನ ಯೋಜನೆಯಡಿ ಗ್ರಾಮೀಣ ಪ್ರದೇಶಗಳಲ್ಲಿ ಕುಡಿಯುವ ನೀರನ್ನು ಒದಗಿಸಲು ಎಷ್ಟು ಯೋಜನೆಗಳನ್ನು ಕೈಗೊಳ್ಳಲಾಗಿದೆ.

(ಆ) ಈ ಯೋಜನೆಗಳು ಪೂರ್ಣಗೊಂಡಿವೆಯೇ;

(ಇ) ಹಾಗಿದ್ದಲ್ಲಿ, ಈ ಯೋಜನೆಗಳನ್ನು ನಿರ್ವಹಿಸಲು ಪೂರ್ಣ ಪ್ರಮಾಣವಾಗಿ ಗ್ರಾಮ ಪಂಚಾಯತಿಗಳಿಗೆ ವಹಿಸಲಾಗುತ್ತದೆಯೇ;

(ಈ) ಈ ಯೋಜನೆಗಳ ನಿರ್ವಹಣೆಗಾಗಿ ವಿಶೇಷ ಅನುದಾನವನ್ನೇನಾದರೂ ಬಿಡುಗಡೆ ಮಾಡಲಾಗುತ್ತದೆಯೇ (ಪೂರ್ಣ ಮಾಹಿತಿ ನೀಡುವುದು)

ಶ್ರೀ ಜಗದೀಶ್ ಶೆಟ್ಟರ್ : ಮಾನ್ಯ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಸಚಿವರು.

(ಅ) ಈ ಕಾರ್ಯಕ್ರಮದಡಿ, ರಾಜ್ಯದ ಗ್ರಾಮೀಣ ಪ್ರದೇಶಗಳಲ್ಲಿ ಈವರೆವಿಗೆ 303 ಬಹು ಗ್ರಾಮ ಯೋಜನೆಗಳನ್ನು ಮಂಜೂರು ಮಾಡಲಾಗಿದೆ.

(ಆ) ಇವುಗಳ ಪೈಕಿ, 114 ಯೋಜನೆಗಳು ಪೂರ್ಣಗೊಂಡಿದ್ದು, ಉಳಿದ 189 ಯೋಜನೆಗಳನ್ನು ಪೂರ್ಣಗೊಳಿಸಿ, ಕಾರ್ಯಗತಗೊಳಿಸಲು ಕ್ರಮ ಕೈಗೊಳ್ಳಲಾಗುತ್ತಿದೆ.

(ಇ) ಇಂತಹ ಬಹು ಗ್ರಾಮ ಯೋಜನೆಗಳ ನಿರ್ವಹಣೆಯನ್ನು ಗ್ರಾಮ ಪಂಚಾಯತಿ ಅಥವಾ ಪಂ.ರಾಜ್ ಇಂಜಿನಿಯರಿಂಗ್ ವಿಭಾಗ ಅಥವಾ ಹೊರಗುತ್ತಿಗೆ ಆಧಾರದ ಮೇಲೆ ನಿರ್ವಹಣೆ ಮಾಡಿಸಲು ಅವಕಾಶವಿದೆ.

(ಈ) ವಾಸ್ತವಿಕವಾಗಿ ಹೆಚ್ಚುವರಿ ಅನುದಾನದ ಅಗತ್ಯತೆಯಿದ್ದಲ್ಲಿ, ಮೊದಲ ಹಂತದಲ್ಲಿ ವಿಶೇಷ ಅನುದಾನ ಬಿಡುಗಡೆಯಾಗಲಿದೆ. ಇಂತಹ ಪ್ರಕರಣಗಳಲ್ಲಿ ಈಗಾಗಲೇ ರೂ. 31.86 ಕೋಟಿ 2011–12ರ ಸಾಲಿನಲ್ಲಿ ಬಿಡುಗಡೆಯಾಗಿದೆ. ಇನ್ನು ಮುಂದೆ ಅನುಷ್ಠಾನವಾಗುವ ಬಹುಗ್ರಾಮ ಯೋಜನೆಗಳ 5 ವರ್ಷಗಳ ನಿರ್ವಹಣೆ ಜವಾಬ್ದಾರಿ ಆಯಾ ಗುತ್ತಿಗೆದಾರರಿಗೆ ಸೇರಿರುತ್ತದೆ.

ಶ್ರೀ ಕೆ.ಎಂ. ಶಿವಲಿಂಗೇಗೌಡ : ಮಾನ್ಯ ಸಭಾಧ್ಯಕ್ಷರೆ, ನನಗೆ ಉತ್ತರ ದೊರೆತಿದೆ. ಆದರೆ, ರಾಜೀವ್‌ಗಾಂಧಿ ಕುಡಿಯುವ ನೀರಿನ ಯೋಜನೆ ಗ್ರಾಮೀಣ ಪ್ರದೇಶದ flouride ಇರುವ ನಗರಗಳಿಗೆ, ಗ್ರಾಮೀಣ ಪ್ರದೇಶಕ್ಕೆ ನಿಜವಾಗಿಯೂ ಒಂದು ವರದಾನವಾಗಿ ಪರಿಣಮಿಸಿದೆ. ಆದರೆ, 303 ಯೋಜನೆಗಳನ್ನು ತೆಗೆದುಕೊಂಡಿದ್ದರೂ ಕೂಡ ಇವುಗಳು ಬೇಗ ಕಾರ್ಯಪ್ರವೃತ್ತಿಯಾಗುತ್ತಿಲ್ಲ. ಅವುಗಳು ಬೇಗ ಕಾರ್ಯಪ್ರವೃತ್ತಿಯಾದರೂ ಕೂಡ

ಇದರ ನಿರ್ವಹಣೆ ಬಗ್ಗೆ ಹೇಳುತ್ತೇನೆ. ಹಿಂದೆ ನೀವೆಲ್ಲ ನೋಡಿರುವ ಹಾಗೆ, ರಾಜಕೀಯ ಇಚ್ಛಾಶಕ್ತಿಯಿಂದ ಬೇಕಾದಷ್ಟು ಏತ ನೀರಾವರಿ ಯೋಜನೆಗಳಿಗೆ ಮಂಜುರಾತಿ ಮಾಡಿದೆ. ಆದರೆ, ಅವುಗಳಿಗೆ motor, pump ಇಲ್ಲ, ಗಿಡವನ್ನೂ ಕಿತ್ತು ಹಾಕಿಲ್ಲ. ಅದರೊಳಗೆ ಹೋಗಿ ನೋಡಿದರೆ ಹುಳು ಹುಪ್ಪಟೆ ಸೇರಿಕೊಂಡಿರುತ್ತವೆ. ಆ ರೀತಿ ಏನಾದರೂ ಬಹುಶಃ ಈ ಯೋಜನೆಯಾದರೆ ಯಾವ ದೂರದೃಷ್ಟಿಯನ್ನಿಟ್ಟುಕೊಂಡು ನದಿ ಮೂಲದಿಂದ ನೀರನ್ನೊದಗಿಸತಕ್ಕಂಥ ಕಾರ್ಯಕ್ರಮವನ್ನು ಜಾರಿಗೆ ತಂದಿದ್ದಾರೆ, ಅದು ಬಹುಶಃ ಸಫಲವಾಗಲಿಕ್ಕಿಲ್ಲ ಎನ್ನುವಂಥ ಭಾವನೆ ಬರುತ್ತದೆ. ಅತಿ ಜರೂರಾಗಿ ಆ ಕಾರ್ಯಕ್ರಮವಾಗುತ್ತಿಲ್ಲವೆನ್ನುವ ಭಾವನೆ ಇದೆ. flouride ನೀರು ಇದೆ ಎಂದು ಹೇಳಿ ಹೇಳಿ ಸಾಕಾಗಿದೆ. 4–5 ವರ್ಷಗಳಾದರೂ ಒಂದೊಂದು ಯೋಜನೆ ಪೂರ್ಣವಾಗುತ್ತಿಲ್ಲ. ಪೂರ್ಣವಾಗಿರುವ ಯೋಜನೆಗಳನ್ನೂ ಕೆಲವು ಕಡೆ ನೋಡಿದರೆ ಅವುಗಳನ್ನು ಗ್ರಾಮ ಪಂಚಾಯಿತಿಯಿಂದ ನಿರ್ವಹಣೆ ಮಾಡಲಿಕ್ಕೆ ಯಾವುದೇ ಕಾರಣದಿಂದ ಸಾಧ್ಯವಿಲ್ಲ. ಮಾನ್ಯ ಸಚಿವರು ಉತ್ತರ ಕೊಟ್ಟಹಾಗೆ, ಆ ನಿರ್ವಹಣೆಗೆ ಹೊರಗುತ್ತಿಗೆ ಎನ್ನುವ ಪದ ಇದೆಯಲ್ಲ ಅದು ನಿಜವಾಗಿಯೂ ಕಂಟಕಪ್ರಾಯ. ಆಸ್ಪತ್ರೆಯಲ್ಲಿ ನೋಡಿದರೆ ಅಲ್ಲಿಯೂ ಹೊರಗುತ್ತಿಗೆ, ಎಲ್ಲೆಲ್ಲಿ ನೋಡಿದರೂ ಅದನ್ನು ಹೊರಗುತ್ತಿಗೆ ಎಂದು ಕೊಟ್ಟು ಏನಾಗಿದೆ ಎಂದು ನಾವು ದಿನ ಬೆಳಗ್ಗೆ ನೋಡುತ್ತಿದ್ದೇವೆ. ಅದೇ ರೀತಿ, ಕುಡಿಯುವ ನೀರಿನ ಈ ಯೋಜನೆಗೂ ಸಹ ಹೊರಗುತ್ತಿಗೆ ಎನ್ನುವ ಪದವನ್ನು ದಯವಿಟ್ಟು ಉಪಯೋಗಿಸಬೇಡಿ. ಇದಕ್ಕೇನಾದರೊಂದು special sub division ತೆರೆದು, ಇದಕ್ಕೆ ಬಜೆಟ್‌ನಲ್ಲಿ ವಿಶೇಷವಾದ ಅನುದಾನವನ್ನು ಅಳವಡಿಸಿಕೊಂಡು ಇದರ ನಿರ್ವಹಣೆ ಮಾಡಬೇಕು. ಯಾವ ಮೂಲ ಉದ್ದೇಶದಿಂದ ಈ ಯೋಜನೆಯನ್ನು ಜಾರಿಗೆ ತಂದಿದ್ದೇವೋ, ನಿಜವಾಗಿಯೂ ಗ್ರಾಮೀಣ ಪ್ರದೇಶದ ರೈತರ ಕುಡಿಯುವ ನೀರಿನ ಅವಶ್ಯಕತೆ ದೃಷ್ಟಿಯಿಂದ ಈ ಯೋಜನೆಯನ್ನು ದಯಮಾಡಿ ಬಹಳ ಮಹತ್ವಪೂರ್ಣವಾಗಿ ತೆಗೆದುಕೊಂಡು ಇದಕ್ಕೊಂದು ಘನತೆ ಗೌರವ ಕೊಟ್ಟು ಇದಕ್ಕೆ ಒಳ್ಳೆಯದು ಮಾಡಬೇಕು. ನಮ್ಮ ಕ್ಷೇತ್ರದಲ್ಲಿ 80% flouride ಇದೆ.

ಅಧ್ಯಕ್ಷರು : ನೀವು ಉಪ ಪ್ರಶ್ನೆ ಕೇಳಿ ಎಂದರೆ ಭಾಷಣ ಮಾಡುತ್ತೀರಿ. ಮಾನ್ಯ ಸಚಿವರು ಉತ್ತರ ಹೇಳಲಿ.

ಶ್ರೀ ಕೆ.ಎಂ. ಶಿವಲಿಂಗೇಗೌಡ : ಭಾಷಣ ಅಲ್ಲ. ಉಪಪ್ರಶ್ನೆ ಯಲ್ಲೇ ಎಲ್ಲಾ ಪ್ರಶ್ನೆಗಳನ್ನೂ ಕೇಳುತ್ತಿದ್ದೇನೆ. ದಯವಿಟ್ಟು ಸಚಿವರು ಇದರ ಬಗ್ಗೆ ಮನಸ್ಸು ಮಾಡಿ. ಇದು ರಾಜ್ಯದ ಸಮಸ್ಯೆ. ನನ್ನ ಕ್ಷೇತ್ರದಲ್ಲಿ ಜಾಸ್ತಿ ಸಮಸ್ಯೆ ಇರಬಹುದು. ಈ ಸಮಸ್ಯೆ ಎಲ್ಲಾ ಕಡೆ

ಇದೆ. ಈ ಸಮಸ್ಯೆ ಬಗೆಹರಿಯುವುದು ಎಲ್ಲಾ ಶಾಸಕರಿಗೂ ಬೇಕಾಗಿದೆ. ದಯವಿಟ್ಟು ಒಂದು special division, sub division open ಮಾಡಿ ಅದರ ಮುಖಾಂತರ ನಿರ್ವಹಣೆ ಮಾಡಬೇಕು. ಹೊರಗುತ್ತಿಗೆ ಕೊಡಬೇಡಿ ಎನ್ನುವುದು ನನ್ನ ಮನವಿ.

ಶ್ರೀ ಜಗದೀಶ್ ಶೆಟ್ಟರ್ : ಮಾನ್ಯ ಶಾಸಕರಾದ ಶಿವಲಿಂಗೇಗೌಡರವರು ಬಹಳ ಪ್ರಮುಖವಾದ ಪ್ರಶ್ನೆ ಕೇಳಿದ್ದಾರೆ. ಇಡೀ ರಾಜ್ಯದಲ್ಲಿ ಕುಡಿಯುವ ನೀರಿನ ಯೋಜನೆಗಳನ್ನು ಅನುಷ್ಠಾನ ಮಾಡುವ ಬಗ್ಗೆ ಎಲ್ಲಾ ಕಡೆ ಪ್ರಾಮಾಣಿಕ ಪ್ರಯತ್ನ ನಡೆಯುತ್ತಿದೆ. ಅವರು ಇಡೀ ರಾಜ್ಯಕ್ಕೆ ಸಂಬಂಧಪಟ್ಟ ಹಾಗೆ ಪ್ರಶ್ನೆ ಕೇಳಿದ್ದಾರೆ. ಅದರ ನಿರ್ವಹಣೆ ಯಾವ ರೀತಿ ಇರಬೇಕೆಂಬ ಬಗ್ಗೆ ಅವರು ಕೆಲವು ಸಲಹೆ ಸೂಚನೆಗಳನ್ನು ಕೊಟ್ಟಿದ್ದಾರೆ. ಇಡೀ ರಾಜ್ಯದಲ್ಲಿ ಈಗಾಗಲೇ ನಾವು Multi villages scheme ನ 303 ಯೋಜನೆಗಳನ್ನು ತೆಗೆದುಕೊಂಡಿದ್ದೇವೆ. ಅದರಲ್ಲಿ ಈಗಾಗಲೇ 114 ಯೋಜನೆಗಳನ್ನು ಪೂರ್ಣಗೊಳಿಸಿದ್ದೇವೆ ಮತ್ತು 189 ಯೋಜನೆಗಳ process ನಡೆಯುತ್ತಿದೆ. ತಮ್ಮ ಅರಸೀಕೆರೆ ತಾಲ್ಲೂಕಿಗೆ ಸಂಬಂಧಪಟ್ಟಹಾಗೆ ಹೇಳುವುದಾದರೆ, ಅಂಗನಹಳ್ಳಿ ಯೋಜನೆ ಈಗಾಗಲೇ ಮುಗಿದಿದೆ, ಮುಗಿಯುವ ಹಂತಕ್ಕೆ ಬಂದಿದೆ. ಅರಸೀಕೆರೆ ಮತ್ತು 48 village ಇದು ದೊಡ್ಡ ಯೋಜನೆ. ಅದು almost complete ಆಗುತ್ತದೆ. ಇನ್ನೊಂದು 2–3 ತಿಂಗಳಲ್ಲಿ ಮುಕ್ತಾಯಗೊಳಿಸುತ್ತೇವೆ.

ಶ್ರೀ ಕೆ.ಎಂ. ಶಿವಲಿಂಗೇಗೌಡ : ಸಚಿವರಿಗೆ ಯಾರೋ ತಪ್ಪು ಮಾಹಿತಿ ಕೊಟ್ಟಿದ್ದಾರೆ. ಇನ್ನೂ ಸರ್ವೆ ಕಾರ್ಯ ಪ್ರಾರಂಭವಾಗಿಲ್ಲ.

ಶ್ರೀ ಜಗದೀಶ್ ಶೆಟ್ಟರ್ : ಅರಸೀಕೆರೆ ಮತ್ತು 48 ಹಳ್ಳಿಗಳು, ಈ ಯೋಜನೆಯ ಕೆಲಸ ನಡೆಯುತ್ತಿದೆ.

ಶ್ರೀ ಕೆ.ಎಂ. ಶಿವಲಿಂಗೇಗೌಡ : ಯಗಚಿಯಿಂದ ಮಾಡಿರುವ ಕೆಲಸ ಆಗಿದೆ. ಅದು ಇನ್ನೂ ಮುಗಿದಿಲ್ಲ. contractor ಏನು ಮಾಡುತ್ತಾರೆಂದರೆ, pipeline ನಲ್ಲಿ ಹಣ ಉಳಿಯುತ್ತದೆಂದು ಮೊದಲು pipeline ಅಗೆಯುತ್ತಾರೆ. ಅವರು tank ಗಳನ್ನು ಕಟ್ಟುವುದಿಲ್ಲ. main ಯಾವುದು workout ಆಗುತ್ತದೋ ಅದನ್ನು ಮಾಡಿ ನಿಲ್ಲಿಸಿದ್ದಾರೆ. ಬೇಲೂರು ಕ್ಷೇತ್ರ ಮತ್ತು ಅರಸೀಕೆರೆ ಕ್ಷೇತ್ರ ಎರಡಕ್ಕೂ ಜಾಯಿಂಟ್ ಆಗಿ ಕಾರ್ಯಕ್ರಮ ಆಗುತ್ತಿದೆ. ಮೂರುವರೆ ವರ್ಷಗಳಾದರೂ ಇನ್ನೂ ಮುಗಿದಿಲ್ಲ.

ಅಧ್ಯಕ್ಷರು : ಮಾನ್ಯ ಸಚಿವರು ಇನ್ನೂ ಉತ್ತರ ಹೇಳಿ ಮುಗಿಸಿಲ್ಲ. ಮಧ್ಯೆ ಮಧ್ಯೆ ಪ್ರಶ್ನೆ ಕೇಳಿದರೆ ಹೇಗೆ? ಒಂದು ಗಂಟೆ ಮೇಲಾಯಿತು.

ಶ್ರೀ ಜಗದೀಶ್ ಶೆಟ್ಟರ್ : ಆದಷ್ಟು ಬೇಗ ಮುಗಿಸುವುದಕ್ಕೆ ನಾನು instructions ಕೊಡುತ್ತೇನೆ. ಹಾಸನ ಜಿಲ್ಲೆಯಲ್ಲಿ ಬಹಳಷ್ಟು ಕಡೆ flouride contents ಇದೆ ಎಂದು ತಾವು ಹೇಳಿದ್ದೀರಿ. ಬಾಣಾವರ ಮತ್ತು ಗಂಡಸಿಯಲ್ಲಿ preliminary survey ನಡೆಯುತ್ತಿದೆ. ಆ ಯೋಜನೆ ಅನುಷ್ಠಾನವಾದರೆ 500 villages cover ಆಗುತ್ತದೆ. ಇದು ದೊಡ್ಡ ಯೋಜನೆ. ಇದಕ್ಕೆ ಹೆಚ್ಚು ಮಹತ್ವ ಕೊಟ್ಟು ಆದಷ್ಟು ಪರಿಣಾಮಕಾರಿಯಾಗಿ ಅನುಷ್ಠಾನ ಮಾಡುವುದಕ್ಕೆ survey ನಡೆಯುತ್ತಿದೆ. ಆದಷ್ಟು ಬೇಗ ಅದನ್ನೂ ಪ್ರಾರಂಭ ಮಾಡಿಸುತ್ತೇವೆ. ಹಳ್ಳಿ ಮೈಸೂರಿಗೂ revised estimate 10 ಕೋಟಿ 74 ಲಕ್ಷ ರೂ. ಆಗಿದೆ. ಅದಕ್ಕೂ ಸಹ ಈ cabinet approval ತೆಗೆದುಕೊಳ್ಳುತ್ತೇವೆ. ಯಾವ್ಯಾವುದು multi villages ಬರುತ್ತಿವೆ. ಅದಕ್ಕೆ priority ಕೊಟ್ಟು ಎಂದು surface water source ಮುಖಾಂತರ ಆದಷ್ಟು multi villages scheme ಗಳನ್ನು implement ಮಾಡುವ ಪ್ರಯತ್ನ ಮಾಡುತ್ತಿದ್ದೇವೆ. ಇದರ ಜೊತೆಗೆ ಇವು implement ಆದಮೇಲೆ commission ಆದಮೇಲೆ ನೀವು ಹೇಳಿದ ಹಾಗೆ ಅವುಗಳನ್ನು ನಿರ್ವಹಣೆ ಮಾಡುವುದು ಬಹಳ ಅವಶ್ಯಕತೆ ಇದೆ. ಅದರಲ್ಲಿ individual ಹಳ್ಳಿಗಳಿಗೆ ಆ ಗ್ರಾಮ ಪಂಚಾಯತಿಯವರು ಮಾಡಬಹುದು. ಆದರೆ, multi village scheme ನಲ್ಲಿ 10 village, 12 village ಅವುಗಳ ಜವಾಬ್ದಾರಿಯನ್ನು ಯಾವುದೇ ಗ್ರಾಮ ಪಂಚಾಯತಿ ತೆಗೆದುಕೊಳ್ಳುವುದಿಲ್ಲ. ಜಿಲ್ಲಾ ಪಂಚಾಯತ್‌ನವರೇ ಜವಾಬ್ದಾರಿ ತೆಗೆದುಕೊಂಡು ಮಾಡಬೇಕು. ನಿರ್ವಹಣೆ ಬಗ್ಗೆ ನಾವು ಹೊಸ ಸಾಲಿಸಿ ತೆಗೆದುಕೊಂಡಿದ್ದೇವೆ. ಈಗಾಗಲೇ cabinet approval ತೆಗೆದುಕೊಂಡಿದ್ದೇವೆ. O & M ಬಗ್ಗೆ ಹೊಸದಾಗಿ ನೀತಿಯನ್ನು ತೆಗೆದುಕೊಂಡು ಬರುತ್ತೇವೆ. ಅದರ ಪ್ರಕಾರ ಮುಂದೆ multi villages schemes ಬರುತ್ತವೆ ಅವುಗಳಿಗೆ tender ನಲ್ಲಿಯೇ ನಾವು conditions ಹಾಕುತ್ತಿದ್ದೇವೆ. work complete ಮಾಡಿದಮೇಲೆ 5 ವರ್ಷ ಅವರೇ maintain ಮಾಡಬೇಕು ಎಂಬ condition ಅನ್ನು ಅದರಲ್ಲಿ include ಮಾಡುತ್ತಿದ್ದೇವೆ. ಹೀಗಾಗಿ ಜವಾಬ್ದಾರಿ ಅವರ ಮೇಲೆಯೇ ಇರುತ್ತದೆ. ಅವರು commission ಮಾಡಿ ಹೋಗುವ ಹಾಗಿಲ್ಲ. ZP ಗ್ರಾಮ ಪಂಚಾಯತಿಯ handover ಮಾಡಿ ಹೋಗುವ ಹಾಗಿಲ್ಲ. ಐದು ವರ್ಷ ಅವರೇ maintain ಮಾಡಬೇಕಾಗುತ್ತದೆ. ಹೊಸದಕ್ಕೂ ನಾವು ಆ condition ಹಾಕುತ್ತಿದ್ದೇವೆ. ಈ ಒಳಗೆ ಅನುಷ್ಠಾನವಾದುದಕ್ಕೂ ZP ಮೂಲಕ ಅನುಷ್ಠಾನ ಮಾಡುವುದು. Multi villages ನಾವು ನಿರ್ವಹಣೆ ಮಾಡುತ್ತೇವೆ. ಎಲ್ಲಿ ಅವಶ್ಯಕತೆ ಇದೆ ಅಲ್ಲಿ ಮಾತ್ರ outsourcing ಇದೆ. ಇದು compulsory ಅಲ್ಲ. compulsory ಆಗಿ outsourcing ಕೊಡಬೇಕೆಂದು ನಾವು ಎಲ್ಲಿಯೂ instructions ಕೊಟ್ಟಿಲ್ಲ. ZP ಮಾಡಬಹುದು, ಮಾಡಬೇಕು. ಅವರಿಗೆ

ಯಾವುದಾದರೂ convenient ಆದರೆ ಅಲ್ಲಿಯೇ ನಿರ್ಣಯ ತೆಗೆದುಕೊಂಡು ಯಾವುದೋ Agency ಯವರಿಗೋ NGO ರವರಿಗೋ ಕೊಟ್ಟು ನಿರ್ವಹಣೆ ಮಾಡುತ್ತೇವೆಂದರೆ ಮಾಡಲಿಕ್ಕೆ ಅವಕಾಶ ಕೊಟ್ಟಿದ್ದೇವೆಯೇ ಹೊರತು compulsory ಮಾಡಿಲ್ಲ. ನಿರ್ವಹಣೆ ಬಹಳ ಮುಖ್ಯವಾದದ್ದು. ಬಹಳ ಕಡೆಯಿಂದ electric charges ಬಗ್ಗೆ ನಮಗೆ complaint ಬಂದಿತ್ತು. Actually commercial rate ಮೇಲೆ charge ಮಾಡುತ್ತಾರೆ. Domestic rate ಮೇಲೆ ಮಾಡಬೇಕೆಂಬುದು ಹೊಸ ಪಾಲಿಸಿಯಲ್ಲಿದೆ. ನಾನು Delhi ಯಲ್ಲಿ ಕೇಂದ್ರ ಸಚಿವರನ್ನು ಭೇಟಿಯಾಗಿ ಹೇಳಿದ್ದೇನೆ, Seminar ನಲ್ಲೂ ಸಹ ಸಲಹೆ ಕೊಟ್ಟಿದ್ದೇನೆ. ಎಲ್ಲಾ ಕಡೆ commercial rate ನಲ್ಲಿಯೆ charge ಮಾಡುತ್ತಾರೆ. ಅದರಿಂದ ಗ್ರಾಮ ಪಂಚಾಯತಿಗೆ ಹೆಚ್ಚು burden ಬರುತ್ತದೆ. ಆದ್ದರಿಂದ, domestic rate ಮೇಲೆ charge ಮಾಡಿದರೆ burden ಕಡಿಮೆಯಾಗುತ್ತದೆಂದು ಹೇಳಿದ್ದೇನೆ. ಅದನ್ನೂ ಸಹ ನಾವು ಪರಿವರ್ತನೆ ಮಾಡುವ ಕೆಲಸ ಮಾಡುತ್ತೇವೆ.

ಶ್ರೀ ವೆಂಕಟರಾವ್ ನಾಡಗೌಡ : ಕಿಲೋ ಮೀಟರ್‌ಗಳನ್ನು ಅಳೆಯುವುದರಲ್ಲಿ ಹೆಚ್ಚು ಕಡಿಮೆ ಆಗಿ ಹಣದ ಕೊರತೆಯಿಂದ ತೊಂದರೆಯಾಗಿದೆ. ಅದರ ಕಡೆಗೆ ಗಮನಹರಿಸಿ.

ಅಧ್ಯಕ್ಷರು: ಬರಗಾಲದ ಮೇಲೆ ಚರ್ಚೆ ಮಾಡುವಾಗ ಇದೆಲ್ಲ ಬರುತ್ತದೆ.

ಶ್ರೀ ಬಂಡೆಪ್ಪ ಕಾಶೆಂಪೂರ್ : ನಮ್ಮ ಬೀದರ್ ಜಿಲ್ಲೆಯಲ್ಲಿ ರಾಜೀವ್‌ಗಾಂಧಿ submission ನ ಎರಡು schemes ಬಂದಿದೆ. ಅವೆರಡೂ cancel ಆಗಿವೆ. ತಮಗೂ ನಾನು ಲೆಟರ್ ಕೊಟ್ಟಿದ್ದೆ. ಅದನ್ನು ಜಲ ನಿರ್ಮಲ ಯೋಜನೆಯಲ್ಲಿ ತೆಗೆದುಕೊಂಡಿದ್ದಾರೆ. ಆ ಯೋಜನೆಯಡಿಯಲ್ಲಿ ಇವತ್ತಿಗೂ ಚಾಲನೆಯಾಗಿಲ್ಲ. Complete ಜಿಲ್ಲೆಯೇ neglect ಆಗಿದೆ. ದಯವಿಟ್ಟು ಇದರ ಬಗ್ಗೆ ಬೆಳಕು ಚೆಲ್ಲಿ.

ಶ್ರೀ ಹುಕ್ಕೇರಿ ಪ್ರಕಾಶ ಬಾಬಣ್ಣ : ಈಗಾಗಲೆ ತಾವು multi villages ನಿರ್ವಹಣೆಗೆ ರಾಜ್ಯದಲ್ಲಿ 38 ಕೋಟಿ ರೂ.ಗಳನ್ನು ಕೊಟ್ಟಿದ್ದೀರಿ. ಉದಾಹರಣೆಗೆ, ಬೆಳಗಾಂ ಜಿಲ್ಲೆಗೆ ಕೊಟ್ಟಿದ್ದೀರಿ, ಆದೇಶದ ಪ್ರತಿ ಕೂಡ ಇದೆ.

ಅಧ್ಯಕ್ಷರು : ಈ ವಿಷಯ ಹಾಸನ ಜಿಲ್ಲೆಗೆ ಸಂಬಂಧಪಟ್ಟಿದ್ದು. ನೀವು ಹೀಗೆ ಬೇರೆ ಬೇರೆ ಕ್ಷೇತ್ರದ ಪ್ರಶ್ನೆ ಕೇಳಿದರೆ ಅವರು ಹೇಗೆ ಉತ್ತರ ಕೊಡುತ್ತಾರೆ?

ಶ್ರೀ ಹುಕ್ಕೇರಿ ಪ್ರಕಾಶ ಬಾಬಣ್ಣ : ವಿದ್ಯುತ್ ಬಿಲ್ ಕಟ್ಟಬೇಕು. ಹೊಸ ಕಾಮಗಾರಿ

ತೆಗೆದುಕೊಳ್ಳಬಾರದೆಂದು ಷರತ್ತು ಹಾಕಿದ್ದೀರಿ. Multi villages scheme ಅಡಿಯಲ್ಲಿ ಗ್ರಾಮಾಂತರ ಪ್ರದೇಶಗಳಲ್ಲಿ pipeline ಇಲ್ಲ. ಯಾವ ಓಣಿಯವರಿಗೆ ನೀರು ಮುಟ್ಟುವುದಿಲ್ಲ ಅಂತದ್ದಕ್ಕೂ ತಾವು ಅವಕಾಶ ಮಾಡಿಕೊಡಬೇಕು. ಈಗಾಗಲೇ ತಾವು ರಾಜ್ಯದಲ್ಲಿ ನಿರ್ವಹಣೆಗೋಸ್ಕರ 38 ಕೋಟಿ ರೂಪಾಯಿಗಳನ್ನು ಬಿಡುಗಡೆ ಮಾಡಿದ್ದೀರಿ. ಹೊಸ ಕಾಮಗಾರಿಗಳನ್ನೂ ಸೇರಿಸಲಿಕ್ಕೆ ಅವಕಾಶ ಮಾಡಿಕೊಡಬೇಕು.

ಶ್ರೀ ಜಗದೀಶ್ ಶೆಟ್ಟರ್ : ಪ್ರಕಾಶ ಹುಕ್ಕೇರಿಯವರು, ಬಂಡೆಪ್ಪ ಕಾಶೆಂಪೂರ್‌ರವರು ಪ್ರಸ್ತಾಪಿಸಿದರು. ನಾನು ಬೀದರ್‌ನಲ್ಲಿ review meeting ಮಾಡಿದ್ದೇನೆ. ನಾನು ಎಲ್ಲೆಲ್ಲಿ review meeting ಮಾಡುತ್ತೇನೆ, ಎಲ್ಲಾ ಕಡೆಯೂ ಅಧಿಕಾರಿಗಳಿಗೆ ಮತ್ತು ಇಂಜಿನಿಯರ್‌ಗಳಿಗೆ ಒತ್ತಡ ತಂದು ಹೇಳುವುದು ಏನೆಂದರೆ, drinking water ಗೆ first priority ಕೊಟ್ಟು ಆದಷ್ಟು ಬೇಗ ಕೆಲಸ complete ಆಗಬೆಕು, perfect ಆಗಿ ಕೆಲಸ ಮಾಡಬೇಕೆಂದು instructions ಕೊಟ್ಟಿದ್ದೇನೆ. ಬೀದರ್ ಬಗ್ಗೆ ತಾವು ಹೇಳಿದಿರಿ. ಜಲ ನಿರ್ಮಲ ಯೋಜನೆಯಲ್ಲಿ ಕೆಲವು ತೆಗೆದುಕೊಂಡಿದ್ದೇವೆ. ಅದರಲ್ಲಿ ಕೆಲವು ಶುರುವಾಗಿಲ್ಲ, ರದ್ದಾಗಿದೆ ಎಂದೇನು ತಾವು ಹೇಳಿದಿರಿ, ನಾನು ಅದನ್ನು ವಿಚಾರಿಸುತ್ತೇನೆ.

ಶ್ರೀ ಬಂಡೆಪ್ಪ ಕಾಶೆಂಪುರ್ : ಜಲ ನಿರ್ಮಲ ಯೋಜನೆಯಲ್ಲಿ ರದ್ದಾಗಿಲ್ಲ. ರಾಜೀವಗಾಂಧಿ ಸಬ್‌ಮಿಷನ್ ಸ್ಕೀಂ ನಲ್ಲಿ ರದ್ದಾಗಿದೆ. ಅದರಲ್ಲಿ ಇದುವರೆಗೆ ಕಾಮಗಾರಿ ಶುರುವಾಗಿಲ್ಲ.

ಶ್ರೀ ಜಗದೀಶ್ ಶೆಟ್ಟರ್ : ಆ ಕಂಡೀಶನ್‌ನೊಳಗೆ ಯಾವುದು ಬೀದರ್ ಜಿಲ್ಲೆಯದು ಬಂದಿದೆ ಅದನ್ನು ನಾನು ತನಿಖೆ ಮಾಡಿಸುತ್ತೇನೆ. ಯಾವುದೋ ಒಂದು ತಾಂತ್ರಿಕ ಕಾರಣಗಳ ಸಲುವಾಗಿ ಯಾವುದು ಆ ಗೈಡ್ ಲೈನ್ಸ್‌ನ ವಿತ್‌ಇನ್ ದಿ ಪರ್ವಿವ್ ಒಳಗೆ ಬರುವುದಿಲ್ಲ ಎನ್ನುವುದಕ್ಕಾಗಿ ಅವು ರದ್ದಾಗಿರುತ್ತವೆ. ನಾನು ಅದನ್ನು ಪುನರ್ ಪರಿಶೀಲಿಸುತ್ತೇನೆ. ಮಾನ್ಯ ಪ್ರಕಾಶ್ ಹುಕ್ಕೇರಿಯವರು ಹೇಳಿದ ಹಾಗೆ, ಈಗಾಗಲೇ 31 ಕೋಟಿ ನಿರ್ವಹಣೆ ಸಲುವಾಗಿ ಬಿಡುಗಡೆ ಮಾಡಿದ್ದೇವೆ. ಮಲ್ಟಿ ವಿಲೇಜ್ ಸ್ಕೀಂ ನಲ್ಲಿ ಕಮೀಷನ್ ಆದ ನಂತರ ಅದರಲ್ಲಿ ಕೆಲವು ಡಿಫಂಕ್ಟ್ ಆಗಿರುತ್ತವೆ. ಅದಕ್ಕೆ ಒಂದಿಷ್ಟು ಅಡಿಷನಲ್ ವರ್ಕ್ ಮಾಡಬೇಕಾಗುತ್ತದೆ. ಅಂಥವುಗಳನ್ನು ಕನ್ಸೀಡರ್ ಮಾಡಿಕೊಂಡು ಮಾಡುತ್ತೇವೆ.

ಶ್ರೀ ವೆಂಕಟರಾವ್ ನಾಡಗೌಡ : ನಮ್ಮ ಸಿಂಧನೂರು ಕ್ಷೇತ್ರದಲ್ಲಿ ಕೆಲವು ಕಿಲೋಮೀಟರ್‌ಗಟ್ಟಲೆ ಕಾಮಗಾರಿ ಬಾಕಿ ಇದೆ ದುಡ್ಡಿನ ಕೊರತೆಯಿಂದಾಗಿ ಕೆಲಸಗಳು ನಿಂತಿವೆ.

ಶ್ರೀ ಜಗದೀಶ್ ಶೆಟ್ಟರ್ : ತಾವು ಯಾವುದು ಹೇಳುತ್ತೀರಿ ಅದನ್ನು ನಿರ್ದಿಷ್ಟವಾಗಿ ನನಗೆ ಬರೆದುಕೊಡಿ ನಾನು ಅದನ್ನು ಮಾಡಿಸುತ್ತೇನೆ.

ಶ್ರೀ ಕೆ.ಎಂ. ಶಿವಲಿಂಗೇಗೌಡ : ಕನ್‌ಸಲ್ಟೆನ್ಸಿಯನ್ನು ಸರ್ವೆಯರ್‌ಗಳಿಗೆ ತಾವೇನು ಕೊಟ್ಟಿದ್ದೀರಿ ಅವರು ಬೇಗ ಕಾರ್ಯ ನಿರ್ವಹಿಸುತ್ತಿಲ್ಲ.

ಅಧ್ಯಕ್ಷರು : ತಾವು ಸಾಕಷ್ಟು ಮಾತನಾಡಿದ್ದೀರಿ. ಸಾಕು ಬಿಡಿ ವಸಂತಬಂಗೇರರವರೇ ತಾವು ಕೇಳಿ.

ಶ್ರೀ ಕೆ.ಎಂ. ಶಿವಲಿಂಗೇಗೌಡ : ಸರ್ವೆ ಮಾಡುವುದಕ್ಕೆ ತಾವೇನು ಕೊಟ್ಟಿದ್ದೀರಿ ಅವರು ಸರಿಯಾದ ರೀತಿಯಲ್ಲಿ ಮಾಡುತ್ತಿಲ್ಲ ಅವರು ಬಹಳ ನಿಧಾನವಾಗಿ ಕೆಲಸ ಮಾಡುತ್ತಿದ್ದಾರೆ. ಆದುದರಿಂದ ದಯವಿಟ್ಟು ಅತಿ ಜರೂರಾಗಿ ಸರ್ವೆ ಮಾಡಿಸಿ ಕೆಲಸ ಪ್ರಾರಂಭಿಸುವುದಕ್ಕೆ ಮನವಿ ಮಾಡುತ್ತೇನೆ.

ಶ್ರೀ ಜಗದೀಶ್ ಶೆಟ್ಟರ್ : ಇದರ ಬಗ್ಗೆ ನಾನು ಸೂಚನೆ ಕೊಟ್ಟು ಆದಷ್ಟು ಬೇಗನೆ ಸರ್ವೆ ಮಾಡಿಸುವುದಕ್ಕೆ ಹೇಳುತ್ತೇನೆ.

ಘನತ್ಯಾಜ್ಯ ವಿಲೇವಾರಿಗಾಗಿ ಬಿಡುಗಡೆಯಾದ ಅನುದಾನ

26 (07) ಶ್ರೀ ವಸಂತಬಂಗೇರ ಕೆ (ಬೆಳ್ತಂಗಡಿ) : ಮಾನ್ಯ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಸಚಿವರು ದಯೆಯಿಟ್ಟು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೇ:–

ಅ) ಘನ ತ್ಯಾಜ್ಯ ಮತ್ತು ದ್ರವ ತ್ಯಾಜ್ಯ ವಿಲೇವಾರಿಗಾಗಿ 2010–11 ಮತ್ತು 2011–12 ರ ಸಾಲಿನಲ್ಲಿ ದಕ್ಷಿಣ ಕನ್ನಡ ಜಿಲ್ಲೆಗೆ ಬಿಡುಗಡೆ ಮಾಡಿದ ಅನುದಾನ ಎಷ್ಟು ;

ಆ) ಬಿಡುಗಡೆಯಾದ ಅನುದಾನದಲ್ಲಿ ಎಷ್ಟು ಮೊತ್ತವನ್ನು ಖರ್ಚು ಮಾಡಲಾಗಿದೆ (ತಾಲ್ಲೂಕುವಾರು ವಿವರ ನೀಡುವುದು);

ಇ) ಘನ ಮತ್ತು ದ್ರವ ತ್ಯಾಜ್ಯ ವಿಲೇವಾರಿವಾಗಿ ಸರ್ಕಾರದ ಮತ್ತು ಗ್ರಾಮ ಪಂಚಾಯತ್‌ನ ಅನುದಾನ ಸೇರಿ ಗ್ರಾಮ ಪಂಚಾಯತ್‌ಗಳು ಬೆಳ್ತಂಗಡಿ ತಾಲ್ಲೂಕಿನಲ್ಲಿ ಮಾಡಿರುವ ಖರ್ಚು ಎಷ್ಟು (ಪಂಚಾಯತ್‌ವಾರು ವಿವರ ನೀಡುವುದು)?

ಶ್ರೀ ಜಗದೀಶ್ ಶೆಟ್ಟರ್ (ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಸಚಿವರು):–

ಅ) ಘನ ಮತ್ತು ದ್ರವ ತ್ಯಾಜ್ಯ ವಿಲೇವಾರಿಗಾಗಿ ಪ್ರತ್ಯೇಕವಾಗಿ ಸರ್ಕಾರದಿಂದ ದಕ್ಷಿಣ ಕನ್ನಡ ಜಿಲ್ಲೆಗೆ ಯಾವುದೇ ಅನುದಾನ ಬಿಡುಗಡೆಯಾಗಿರುವುದಿಲ್ಲ. ಆದರೆ ಕೇಂದ್ರ ಮತ್ತು